1109 ಶ್ರೀ ರಘುಪತಿ ಭಟ್. ಕೆ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಿಭಜಿತ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಾಡಿಗೆಗೆ ಓಡಿಸುವ ಆಟೋ ರಿಕ್ಷಾಗಳಿಗೆ ಗ್ಯಾಸ್‌ಕಿಟ್ ಅಳವಡಿಕೆ ಕಡ್ಡಾಯ ಹಾಗೂ ನಗರ ಮತ್ತು ಗ್ರಾಮಾಂತರ ಪರ್ಮಿಟ್‌ಗಳೆಂಬ ಭೇದ ಕಲ್ಪಿಸಿರುವುದರಿಂದ ತೊಂದರೆ ಆಗುತ್ತಿರುವ ವಿಚಾರವನ್ನು ರಿಕ್ಷಾ ಚಾಲಕ-ಮಾಲೀಕರು ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ;

ಆ) ಹಾಗಿದ್ದಲ್ಲಿ, ಎರಡು ಸಮಸ್ಯೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳ ಮಟ್ಟಿಗೆ ಆದೇಶ ಸಡಲೀಕರಣಗೊಳಿಸುವುದಕ್ಕಾಗಿ ಸಚಿವರು ರಿಕ್ಷಾ ಚಾಲಕ ನಿಯೋಗಕ್ಕೆ ಭರವಸೆ ನೀಡಿರುವುದು ನಿಜವೇ;

ಇ) ಹೌದಾದಲ್ಲಿ, ಗ್ಯಾಸ್‌ಕಿಟ್ ಕಡ್ಡಾಯ ಹಾಗೂ ನಗರ-ಗ್ರಾಮಾಂತರ ಎಂಬ ಪರ್ಮಿಟ್ ಭೇದವನ್ನು ಎಂದಿನಿಂದ ರದ್ದು ಗೊಳಿಸಲಾಗುವುದು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

769 ಶ್ರೀ ಶ್ರೀನಿವಾಸ್. ಎಂ(ಮಂಡ್ಯ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು-ಬೆಂಗಳೂರು ರೈಲ್ವೆ ಜೋಟಿ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಮೈಸೂರು-ಬೆಂಗಳೂರು ರೈಲ್ವೆ ಜೋಡಿ ಮಾರ್ಗದ ಕಾಮಗಾರಿಗಳು ಕೇಂದ್ರ ಸರ್ಕಾರ ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಿದೆ.

ಉ) ರಾಜ್ಯ ಸರ್ಕಾರವು ತ್ವರಿತವಾಗಿ ಮೈಸೂರು–ಬೆಂಗಳೂರು ರೈಲ್ವೆ ಜೋಡಿ ಮಾರ್ಗದ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದೇ;

ಊ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸ ಲಾಗುವುದು?

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಭೂ ಸ್ವಾಧೀನ ಕಾರ್ಯವು ಈ ಕೆಳಕಂಡಂತೆ ಪ್ರಗತಿಯಲ್ಲಿದೆ.

1) ರಾಮನಗರ–ಶೆಟ್ಟಿಹಳ್ಳಿ ಮತ್ತು ಮೈಸೂರು ನಗರ–ನಾಗನಹಳ್ಳಿ ವಿಭಾಗದ ಕಾಮಗಾರಿ ಪ್ರಗತಿಯಲ್ಲಿದೆ.

2) ಶೆಟ್ಟಿಹಳ್ಳಿಯಿಂದ–ನಾಗನಹಳ್ಳಿಯವರೆಗೆ ಮಂಡ್ಯ ಜಿಲ್ಲೆಗೆ ಸೇರಿದ್ದು ಜಂಟಿ ಮೋಜಣಿ (Joint Survey) ಯನ್ನು ಆಗಸ್ಟ್ / ಸೆಪ್ಟೆಂಬರ್ 2009 ರಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

3) ಶ್ರೀರಂಗಪಟ್ಟಣದ ರೈಲು ನಿಲ್ದಾಣದ ಹತ್ತಿರವಿರುವ ಟಿಪ್ಪು ಸುಲ್ತಾನ್ ಮದ್ದಿನ ಮನೆಯನ್ನು ಸ್ಥಳಾಂತರಿಸಿ ಕೋಟೆ ಜಾಗದಲ್ಲಿಯೇ ಪುನರ್ ನಿರ್ಮಿಸಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ನಿದೇರ್ಶಕರು, ಪ್ರಾಚ್ಯವಸ್ತು ಇಲಾಖೆ ಮೈಸೂರುರವರು ಮದ್ದಿನ ಮನೆಯನ್ನು ಸ್ಥಳಾಂತರಿಸಲು ಅವಶ್ಯಕ ಕ್ರಮ ಕೈಗೊಳ್ಳುತ್ತಿದ್ದಾರೆ.

ಮೈಸೂರು–ನಾಗನಹಳ್ಳಿ ಮಧ್ಯೆ ಬರುವ ಮಾರ್ಗಕಕೆ ಬೇಕಾಗುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 4(1)ರ ಅಧಿಸೂನೆಯನ್ನು ಹೊರಡಿಸಲಾಗಿದೆ.

ಇ) ಬಿಡುಗಡೆಮಾಡಿದೆ.

ಈ) 2009–10ರಲ್ಲಿ ರಾಜ್ಯ ಸರ್ಕಾರದ ಮೊತ್ತ ರೂ.63.85 ಕೋಟಿ ಕಾಯ್ದಿರಿಸಲಾಗಿದೆ. ಕೇಂದ್ರ ಸರ್ಕಾರವು 2009–10ನೇ ಸಾಲಿನಲ್ಲಿ ಆಯವ್ಯದಲ್ಲಿ ರೂ.35 ಕೋಟಿ ಮಂಜೂರಾಗಿದೆ.

ಉ) ಕ್ರಮ ಕೈಗೊಳ್ಳಲಾಗುತ್ತಿದೆ ಜಿಲ್ಲಾಧಿಕಾರಿಗಳ ಪುಟ್ಟದಲ್ಲಿ ತಿಂಳಿಗೊಮ್ಮೆ ರೈಲ್ವೆ ಕಾಮಗಾರಿಗಳ ಪರಿಶೀಲನಾ ಸಭೆ ನಡೆಸಲು ನಿರ್ಧರಿಸಲಾಗಿದೆ.

ಊ) ಸದರಿ ಕಾಮಗಾರಿಯನ್ನು 2012 ರಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.